## ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ-೫೮೩ ೨೭೬

### ಅಕ್ಟೋಬರ್ ೨೪, ೨೦೧೭ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೯೦ನೇ ಸಭೆಯ ನಡವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಶ್ರೀ ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ | : ಸದಸ್ಯರು |
| ೦೩. ಪ್ರೊ. ಎ.ವಿ. ನಾವಡ, ಮಂಗಳೂರು | : ಸದಸ್ಯರು |
| ೦೪. ಡಾ. ವೀರಣ್ಣ ರಾಜೂರ, ಧಾರವಾಡ | : ಸದಸ್ಯರು |
| ೦೫. ಪ್ರೊ. ಸಿದ್ಧಲಿಂಗಯ್ಯ, ಬೆಂಗಳೂರು | : ಸದಸ್ಯರು |
| ೦೬. ಡಾ. ಓ. ಓಬಯ್ಯ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | : ಸದಸ್ಯರು |
| ೦೭. ಶ್ರೀಮತಿ ಮಹಾದೇವಿ ಗೋಕಾಕ್, ವಿಜಯಪುರ | : ಸದಸ್ಯರು |
| ೦೮. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೯. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೦. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೧. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೨. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೧೩. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಶ್ರೀ ಸರಜೂ ಕಾಟ್ಕರ್, ಬೆಳಗಾವಿ | : ಸದಸ್ಯರು |
| ೦೨. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೬. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸದಸ್ಯರಾದ ಡಾ. ಸಿದ್ಧಲಿಂಗಯ್ಯ ಅವರು ವಿಜ್ಞಾನ, ವಾಣಿಜ್ಯ ಮತ್ತು ಮಾನವಿಕ ಪುಸ್ತಕಗಳನ್ನು ಕನ್ನಡದಲ್ಲಿ ಮುದ್ರಿಸಿ, ಕರ್ನಾಟಕ ಮತ್ತು ಇತರೆ ರಾಜ್ಯದ ಕನ್ನಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ನೀಡುವ ಕುರಿತು ಪ್ರಸ್ತಾವನೆ ಮತ್ತು ಅನುದಾನ ವಿವರಗಳನ್ನು ಸಿದ್ದಪಡಿಸಿ, ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆದು ಅನುದಾನ ಬಂದನಂತರ ಕ್ರಮವಹಿಸಲು ಸೂಚಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ವಿಶ್ವವಿದ್ಯಾಲಯದ ವಿವಿಧ ಪ್ರಸ್ತಾವಗಳ ಕುರಿತು ಚರ್ಚಿಸಲು ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಸೇರಿ ಶಿಕ್ಷಣ ಸಚಿವರನ್ನು ಬೇಟಿಮಾಡಲು ಸಭೆ ತೀರ್ಮಾನಿಸಿತು.

**ದಿನಾಂಕ : ೦೬.೦೯.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೯ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)**

**ನಿರ್ಣಯ:** ದಿನಾಂಕ : ೦೬.೦೯.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೯ನೇ ಸಭೆಯ ನಡವಳಿಗಳಿಗೆ ಸಂಬಂಧಿಸಿ ಕ್ರ.ಸಂ.೪ರಲ್ಲಿನ ವಿಷಯದಲ್ಲಿ ಪಿ.ಯು.ಸಿ. ವಿಜ್ಞಾನ ಪುಸ್ತಕಗಳ ಮುದ್ರಣದ ಜೊತೆಗೆ ವಾಣಿಜ್ಯ ಮತ್ತು ಮಾನವಿಕ ವಿಷಯಗಳ ಪುಸ್ತಕಗಳನ್ನು ಕನ್ನಡದಲ್ಲಿ ಪ್ರಕಟಿಸುವ ಬಗ್ಗೆ ಮರುಪರಿಶೀಲಿಸುವುದು ಎಂದು ತಿದ್ದುಪಡಿಮಾಡಲು ಸೂಚಿಸಿ, ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ದಿನಾಂಕ : ೦೬.೦೯.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೯ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)**

**ನಿರ್ಣಯ:** ದಿನಾಂಕ: ೦೬.೦೯.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೯ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೧೯೦.೦೧. ೨೬ನೇ ನುಡಿಹಬ್ಬ/ ಘಟಿಕೋತ್ಸವ ಕುರಿತು.

ನಿರ್ಣಯ: ೧. ಮಾನ್ಯ ಕುಲಪತಿಗಳು ಅಕ್ಟೋಬರ್ ೦೭, ೨೦೧೭ರಂದು ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ೨೬ನೇ ನುಡಿಹಬ್ಬ/ ಘಟಿಕೋತ್ಸವನ್ನು ನವಂಬರ್ ೨೦೧೭ರ ತಿಂಗಳಲ್ಲಿ ನಡೆಸಲು ಅನುಮತಿ ಕೋರಿ ಪತ್ರವನ್ನು ಬರೆದಿರುವ ವಿಷಯವನ್ನು ಸಭೆಗೆ ತಿಳಿಯಪಡಿಸಿದರು.

೨. ಘಟಿಕೋತ್ಸವ ಭಾಷಣಕಾರರನ್ನಾಗಿ ..............................................................................................ಒಬ್ಬರನ್ನು ಆಹ್ವಾನಿಸಬಹುದೆಂದು ಸಭೆಯು ಶಿಫಾರಸ್ಸು ಮಾಡಿತು. (ಸೂಚಿತ ಹೆಸರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಗೌಪ್ಯವಾಗಿರಿಸಲಾಗಿದೆ).

೧೯೦.೦೨. ೨೬ನೇ ನುಡಿಹಬ್ಬದ ನಾಡೋಜ ಆಯ್ಕೆ ಸಮಿತಿ ಸದಸ್ಯರ ನಾಮನಿರ್ದೇಶನ ಕುರಿತು.

೧. ೨೬ನೇ ನುಡಿಹಬ್ಬದ/ ಘಟಿಕೋತ್ಸವದಲ್ಲಿ ಪ್ರಧಾನ ಮಾಡುವ ಗೌರವ ಪ್ರಶಸ್ತಿ ನಾಡೋಜ ಆಯ್ಕೆ ಸಮಿತಿಗೆ ವಿಶ್ವವಿದ್ಯಾಲಯದ ವತಿಯಿಂದ ........................................................................................ ಇವರ ಹೆಸರುಗಳನ್ನು ರಾಜ್ಯಪಾಲರಿಗೆ ಶಿಫಾರಸ್ಸುಮಾಡಲಾಯಿತು.(ಸೂಚಿತ ಹೆಸರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಗೌಪ್ಯವಾಗಿರಿಸಲಾಗಿದೆ).

೨. ೨೦೧೬-೨೦೧೭ರಲ್ಲಿ ನಾಡೋಜ ಪದವಿ ಕೋರಿ ಸಲ್ಲಿಕೆಯಾದ ೭೪ ಅರ್ಜಿಗಳನ್ನು ಹಾಗೂ ೨೦೧೭-೧೮ರಲ್ಲಿ ಸಲ್ಲಿಕೆಯಾದ ೧೦ ಅರ್ಜಿಗಳನ್ನು ಮಾನ್ಯ ಕುಲಚಿವರು ಸಭೆಗೆ ಮಂಡಿಸಿದರು.

೩. ಕಾರ್ಯಕಾರಿ ಸಮಿತಿಯು ಈ ಕೆಳಗಿನ ಹೆಸರುಗಳನ್ನು ನಾಡೋಜ ಪದವಿಗೆ ಸಲ್ಲಿಕೆಯಾಗಿರುವ ಅರ್ಜಿಗಳ ಜೊತೆಗೆ ಈ ಕೆಳಗಿನ ೭(ಏಳು) ಹೆಸರುಗಳನ್ನು ಸೇರಿಸಲು ಶಿಫಾರಸ್ಸು ಮಾಡಿತು.

೧.
೨
೩.
೪.
೫.
೬
೭

(ಸೂಚಿತ ಹೆಸರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಗೌಪ್ಯವಾಗಿರಿಸಲಾಗಿದೆ).

೪. ಈಗಾಗಲೇ ಬೇರೆ ವಿಶ್ವವಿದ್ಯಾಲಯದಿಂದ ಗೌರವ ಪದವಿ ಪಡೆದವರನ್ನು ಕೈಬಿಡಲು ಸಭೆ ಸೂಚಿಸಿತು.

೫. ಬೆಳಗಾವಿ ಜಿಲ್ಲೆಯ ಖಾಸಗಿ ಸಂಘ ಸಂಸ್ಥೆಯೊಂದು ನಾಡೋಜ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದನ್ನು ಪರಿಶೀಲಿಸಿ, ಆಕ್ಷೇಪಣೆಯನ್ನು ಸಲ್ಲಿಸಲು ಸಭೆ ಸೂಚಿಸಿತು.

**೧೯೦.೦೩. ೨೦೧೭ರಲ್ಲಿ ನಡೆದ ಬೋಧಕ ಹುದ್ದೆಗಳ ಸಿಎಎಸ್ ಮುಂಬಡ್ತಿ ಪ್ರಕ್ರಿಯೆಗಳಿಗೆ ಅನುಮೋದನೆ ಕೋರಿ**

ನಿರ್ಣಯ: ೨೦೧೭ರಲ್ಲಿ ನಡೆದ ಬೋಧಕ ಹುದ್ದೆಗಳ ಸಿಎಎಸ್ ಮುಂಬಡ್ತಿ ಪ್ರಕ್ರಿಯೆಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

**೧೯೦.೦೪. ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳಲ್ಲಿ ೩೭೧(ಜೆ) ಸಂಬಂಧಿಸಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನಿಗದಿ ಮತ್ತು ನೇಮಕಾತಿ ಪ್ರಕ್ರಿಯೆಗಳಿಗೆ ಅನುಮೋದನೆ ಕುರಿತು.**

ನಿರ್ಣಯ: ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳಲ್ಲಿ ೩೭೧(ಜೆ) ಸಂಬಂಧಿಸಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನಿಗದಿ ಮತ್ತು ನೇಮಕಾತಿ ಪ್ರಕ್ರಿಯೆಗಳಿಗೆ ಸಭೆ ಅನುಮೋದನೆ ನೀಡಿತು.

**೧೯೦.೦೫. ಕನ್ನಡ ವಿಶ್ವವಿದ್ಯಾಲಯದ ಸಿಬ್ಬಂದಿ ಕೋರಿಕೆಯ ವೈದ್ಯಕೀಯ ವೆಚ್ಚದ ಪಾವತಿಗೆ ನಿರ್ದೇಶನ ಕೋರಿ.**

ನಿರ್ಣಯ: ಸಿಬ್ಬಂದಿಗಳ ವೈದ್ಯಕೀಯ ವೆಚ್ಚಗಳ ಕೋರಿಕೆಯನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

೧. ವೈದ್ಯಾಧಿಕಾರಿಗಳನ್ನು ಒಳಗೊಂಡತೆ ವೈದ್ಯಕೀಯವೆಚ್ಚ ಪರಿಶೀಲನಾ ಸಮಿತಿಯನ್ನು ರಚಿಸಿ ಸಮಿತಿ ತೀರ್ಮಾನದಂತೆ ಪಾವತಿಗೆ ಕ್ರಮವಹಿಸುವುದು.

೨. ಮುಂದಿನ ಶೈಕ್ಷಣಿಕ ವರ್ಷದಿಂದ ಸಿಬ್ಬಂದಿಗಳಿಗೆ ಸಹಕಾರ ಸಂಘದ ಯಶಸ್ವಿನಿ ಯೋಜನೆ ಹಾಗೂ ಗ್ರೂಪ್ ಇನ್ಸುರೆನ್ಸ್‌ಗಳಂತಹ ಸಂಸ್ಥೆಗಳ ಮೂಲಕ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವ ಕುರಿತು ಪರಿಶೀಲಿಸುವುದು.

೩. ಸರ್ಕಾರವು ಗುರುತಿಸಿರುವ ಆಸ್ಪತ್ರೆಗಳಲ್ಲಿ ನಿಯಮಾನುಸಾರ ಸಿಬ್ಬಂದಿಗಳು ವೈದ್ಯಕೀಯ ಚಿಕಿತ್ಸೆ ಪಡೆಯಲು ಅನುಕೂಲವಾಗುವಂತೆ ಕ್ರಮವಹಿಸುವುದು.

೪. ವೈದ್ಯಕೀಯ ವೆಚ್ಚಗಳ ಪಾವತಿಗೆ ಸಂಬಂಧಿಸಿ ೧೦ ಸಾವಿರಕ್ಕಿಂತ ಕಡಿಮೆ ಇರುವ ಕೋರಿಕೆಗಳನ್ನು ಚಾಲ್ತಿಯಲ್ಲಿರುವ ನಿಯಮದಂತೆ ಪೂರ್ಣವಾಗಿ ಪಾವತಿಸಲು ಮತ್ತು ರೂ.೧೦,೦೦೦/-ಕ್ಕಿಂತ ಹೆಚ್ಚುವರಿ ಕೋರಿಕೆಗಳಿಗೆ ಸಂಬಂಧಿಸಿ ವೈದ್ಯಾಧಿಕಾರಿಗಳನ್ನೊಳಗೊಂಡತೆ ಮಾನ್ಯ ಕುಲಪತಿಗಳಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ, ಸರ್ಕಾರದ ನಿಯಮಾನುಸಾರ ಪಾವತಿಸಬಹುದಾದ ವೆಚ್ಚಗಳಲ್ಲಿ ಸಿಬ್ಬಂದಿಗಳಿಗೆ ಸಮಿತಿಯು ಶಿಫಾರಸ್ಸು ಮಾಡುವ ಮೊತ್ತವನ್ನು, ಸರ್ಕಾರಿ ನಿಯಮಗಳಲ್ಲಿ ಸೂಚಿಸಿರುವ ಸಿಬ್ಬಂದಿಯ ಸಂಬಂಧಿಕರಿಗೆ ಸರ್ಕಾರಿ ನಿಯಮಗಳಲ್ಲಿ ಸೂಚಿಸಿರುವ ಪಾವತಿಸಬಹುದಾದ ಮೊತ್ತಗಳಲ್ಲಿ ಶೇ.೫೦% ರಷ್ಟನ್ನು ಸಮಿತಿಯ ಶಿಫಾರಸ್ಸಿನಂತೆ ಪಾವತಿಸಲು ಸಭೆಯು ನಿರ್ದೇಶನ ನೀಡಿತು.

**೧೯೦.೦೬. ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರಕ್ಕೆ ಸರ್ಕಾರದಿಂದ ವಾರ್ಷಿಕ ಅನುದಾನ ಮಂಜೂರಾಗದಿರುವ ಬಗ್ಗೆ.**

ನಿರ್ಣಯ: ಅನುದಾನ ಮಂಜೂರಾಗದ ಕುರಿತು ಸಭೆಯ ಸುದೀರ್ಘವಾಗಿ ಚರ್ಚಿಸಿ,

ಸರ್ಕಾರದ ಅನುದಾನವನ್ನು ನಿರೀಕ್ಷಿಸಿ ವಿಶ್ವವಿದ್ಯಾಲಯವೇ ಎರಡು ವರ್ಷಗಳಿಂದ ಕಾರ್ಯನಿರ್ವಹಿಸಿದ್ದು, ಇದುವರೆಗೂ ಸರ್ಕಾರದಿಂದ ಚಿತ್ರಕಲಾ ನಿರ್ವಹಣಾ ಕೇಂದ್ರದ ಅನುದಾನ ಬಿಡುಗಡೆಯಾಗಿರುವುದಿಲ್ಲ. ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಹೆಚ್ಚಾಗುವುದರಿಂದ ಸಂಬಂಧಿಸಿದ ವಿಷಯದ ಅನುದಾನ ಬಿಡುಗಡೆ ಆಗದಿದ್ದರೆ ವಿಶ್ವವಿದ್ಯಾಲಯಲವು ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸದಿರಲು ಸಭೆ ನಿರ್ದೇಶನ ನೀಡಿತು. ಇದರಿಂದ ಉದ್ಭವಿಸುವ ಯಾವುದೇ ತೊಂದರೆಗಳಿಗೆ ವಿಶ್ವವಿದ್ಯಾಲಯಲವು ಹೊಣೆಯಾಗಿರುವುದಿಲ್ಲ ಎಂದು ಪತ್ರಿಕಾ ಪ್ರಕಟಣೆ ನೀಡಲು ಸಭೆ ಸೂಚಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**೧೯೦.೦೭. ಅಬ್ದುಲ್ ಹಕೀಂ ಅವರ ಬಿ.ಎ ಪದವಿ ಅಂಕಪಟ್ಟಿ ನೈಜತೆ ಪರಿಶೀಲನೆ ವರದಿ ಕುರಿತು.**

ನಿರ್ಣಯ: ಅಬ್ದುಲ್ ಹಕೀಂ ಅವರ ಬಿ.ಎ. ಪದವಿ ಖೊಟ್ಟಿ ಎಂದು ಬುಂದೇಲ್ ಖಂಡ್ ವಿಶ್ವವಿದ್ಯಾಲಯ ಒದಗಿಸಿರುವ ಮಾಹಿತಿಯನ್ನು ಸಭೆಯು ಪರಿಶೀಲಿಸಿ ಈ ಕಳಗಿನಂತೆ ತೀರ್ಮಾನಿಸಿತು.

೧. ಅಬ್ದುಲ್ ಹಕೀಂ ಇವರಿಗೆ ಕನ್ನಡ ವಿಶ್ವವಿದ್ಯಾಲಯವು ನೀಡಿರುವ ಎಂ.ಎ. ಪತ್ರಿಕೋದ್ಯಮ ಪದವಿಯನ್ನು ಹಿಂಪಡೆಯಲು ಸಭೆ ಸೂಚಿಸಿತು.

೨. ಅಬ್ದುಲ್ ಹಕೀಂ ಇವರು ಪಿಎಚ್.ಡಿ. ಅಧ್ಯಯನದ ಪ್ರವೇಶ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಕುವೆಂಪು ವಿಶ್ವವಿದ್ಯಾಲಯದ ಎಂ.ಎ. ಅಂಕಪಟ್ಟಿಯನ್ನು ಪರಿಶೀಲನೆಗಾಗಿ ಸದರಿ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಲು ಸಭೆ ಸೂಚಿಸಿತು.

೩. ಅಬ್ದುಲ್ ಹಕೀಂ ಇವರಿಗೆ ಕನ್ನಡ ವಿಶ್ವವಿದ್ಯಾಲಯವು ನೀಡಿರುವ ಪದವಿಗಳನ್ನು ಹಿಂಪಡೆಯುವ ಕುರಿತು ಕಾನೂನು ಸಲಹೆ ಪಡೆಯಲು ಸಭೆ ತೀರ್ಮಾನಿಸಿತು.

**೧೯೦.೦೮. ದಿನಾಂಕ ೧೬.೧೦.೨೦೧೭ರಂದು ನಡೆದ ಗ್ರಂಥಾಲಯದ ಸಲಹಾ ಸಮಿತಿ ಸಭೆ ನಡವಳಿಗಳಿಗೆ ಸ್ಥಿರೀಕರಣ ಕೋರಿ.**

ನಿರ್ಣಯ: ದಿನಾಂಕ ೧೬.೧೦.೨೦೧೭ರಂದು ನಡೆದ ಗ್ರಂಥಾಲಯದ ಸಲಹಾ ಸಮಿತಿ ಸಭೆ ನಡವಳಿಗಳನ್ನು ಸ್ಥಿರೀಕರಿಸಲು ಕೆಳಗಿನ ಸಲಹೆಗಳನ್ನು ಅಳವಡಿಸಲು ಸೂಚಿಸಿ ಸಭೆಯು ಅನುಮೋದನೆ ನೀಡಿತು.

೧. ವಿಷಯ ಶಿಕ್ಕೆ ಸಂಬಂಧಿಸಿ ಇನ್ನುಮುಂದೆ ಎಲ್ಲ ವಿದ್ಯಾರ್ಥಿಗಳ ಮೂಲ ಅಂಕಪಟ್ಟಿಯನ್ನು ಪಡೆದು ಸದಸ್ಯತ್ವವನ್ನು ನೀಡುವುದು. ಅಧ್ಯಯನದ ನಂತರ ಬೇಬಾಕಿಪತ್ರ ಪಡೆದು ಸದರಿ ಅಂಕಪಟ್ಟಿಗಳನ್ನು ಹಿಂದಿರುಗಿಸುವುದು.

೨. ಒಬ್ಬ ವಿದ್ಯಾರ್ಥಿಗೆ ರೂ.೧೦೦೦/- ಸದಸ್ಯತ್ವ ಶುಲ್ಕವನ್ನು ನಿಗದಿಪಡಿಸುವುದು.

೩. ಒಬ್ಬ ವಿದ್ಯಾರ್ಥಿಗೆ ೫ ಪುಸ್ತಕಗಳನ್ನು ಮಾತ್ರ ಎರವಲು ನೀಡುವುದು.

೪. ವಿದ್ಯಾರ್ಥಿಗಳು ಹೆಚ್ಚಿನ ಸಮಯ ಗ್ರಂಥಾಲಯದಲ್ಲಿರುವಂತೆ ಸೂಚಿಸುವುದು.

೫. ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿ ಲ್ಯಾಪ್‌ಟಾಪ್‌ಗಳನ್ನು ಬಳಸಲು ಅನುಮತಿ ನೀಡುವುದು.

೬. ವಿದ್ಯಾರ್ಥಿಗಳು ಪುಸ್ತಕಗಳನ್ನು ಹಿಂದಿರುಗಿಸದಿದ್ದಲ್ಲಿ ಸದಸ್ಯತ್ವ ಶುಲ್ಕದಲ್ಲಿ ಕಡಿತಗೊಳಿಸುವದು.

೭. ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ **ನನ್ನ ಮೆಚ್ಚಿನ ಪುಸ್ತಕ**... ಎಂಬ ಶೀರ್ಷಿಕೆಯಡಿ ಗ್ರಂಥಾಲಯದಲ್ಲಿ ಕಾರ್ಯಕ್ರಮ ಏರ್ಪಡಿಸುವುದು.

೧೯೦.೦೯. ದಿನಾಂಕ ೧೭.೧೦.೨೦೧೭ರಂದು ನಡೆದ ಖರೀದಿ ಸಮಿತಿ ಸಭೆ ನಡೆವಳಿಗಳಿಗೆ ಸ್ಥಿರೀಕರಣ ಕೋರಿ.

ನಿರ್ಣಯ: ದಿನಾಂಕ ೧೭.೧೦.೨೦೧೭ರಂದು ನಡೆದ ಖರೀದಿ ಸಮಿತಿ ಸಭೆ ನಡೆವಳಿಗಳನ್ನು ಸ್ಥಿರೀಕರಿಸಲು ಸಭೆಯು ಅನುಮೋದನೆ ನೀಡಿತು.

೧೯೦.೧೦. ದಿನಾಂಕ ೨೯.೦೮.೨೦೧೭ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ೨೦೧೭-೧೮ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆ ನಡೆವಳಿಗಳಿಗೆ ಸ್ಥಿರೀಕರಣ ಕೋರಿ.

ನಿರ್ಣಯ: ದಿನಾಂಕ ೨೯.೦೮.೨೦೧೭ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ೨೦೧೭-೧೮ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆ ನಡೆವಳಿಗಳನ್ನು ಸ್ಥಿರೀಕರಿಸಲು ಸಭೆಯು ಅನುಮೋದನೆ ನೀಡಿತು.

೧೯೦.೧೧. ಅಧ್ಯಯನಾಂಗದ ಪ್ರಸ್ತಾವಗಳು

೧. ಡಾ. ಬಿ.ಡಿ. ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕಲಬುರ್ಗಿ ಮಾನ್ಯತಾ ಕೇಂದ್ರಕ್ಕೆ ಎಂ.ಫಿಲ್ ಮತ್ತು ಪಿಎಚ್.ಡಿ. ಕೋರ್ಸ್‌ಗಳಿಗೆ ಮಾನ್ಯತೆ ನೀಡಿ ದಿನಾಂಕ ೧೭.೦೨.೨೦೧೭ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಪ್ರಕ್ರಿಯೆಗಳಿಗೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

೨. ೨೦೧೭-೧೮ನೇ ಸಾಲಿನ ವಿದ್ಯಾರಣ್ಯದ ಅಧ್ಯಯನ ವಿಭಾಗಗಳಿಗೆ ಹಾಗೂ ಮಾನ್ಯತಾ ಕೇಂದ್ರಗಳಿಗೆ ಬಾಹ್ಯ ಮಾರ್ಗದರ್ಶಕರಾಗಲು ಪರಿಗಣಿಸುವಂತೆ ಕೋರಿ ೧೯ ಜನ ಅಧ್ಯಾಪಕರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಬಾಹ್ಯ ಮಾರ್ಗದರ್ಶಕರ ಆಯ್ಕೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

೩. ೨೦೧೬-೧೭ನೇ ಸಾಲಿನಲ್ಲಿ ಜಾರಿಯಲ್ಲಿರುವ ೧೮೫ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಪಿಎಚ್.ಡಿ. ಅಧ್ಯಯನ ನಿಯಮಾವಳಿಯನ್ನು ನೂತನವಾಗಿ ಆಂಶಿಕವಾಗಿ ಪರಿಷ್ಕರಿಸಿ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಗೆ ಸಲ್ಲಿಸಿದೆ.

೪. ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳ ಕನ್ನಡ ವಿಷಯದ ಪಿಎಚ್.ಡಿ. ಮಹಾಪ್ರಬಂಧಗಳ ಮೌಲ್ಯಮಾಪಕರ ಪರಿಷ್ಕೃತ ಪಟ್ಟಿಗೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ: ಅಧ್ಯಯನಾಂಗದ ಪ್ರಸ್ತಾವನೆಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ತೀರ್ಮಾನಿಸಿತು.

೧. ಡಾ. ಬಿ.ಡಿ. ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕಲಬುರ್ಗಿ ಮಾನ್ಯತಾ ಕೇಂದ್ರದ ಎಂ.ಫಿಲ್ ಮತ್ತು ಪಿಎಚ್.ಡಿ. ಕೋರ್ಸ್‌ಗಳಿಗೆ ಸಂಬಂಧಿಸಿ ದಿನಾಂಕ ೧೭.೦೨.೨೦೧೭ರಂದು ಹೊರಡಿಸಿದ ಅಧಿಸೂಚನೆಗೆ ಸಭೆ ಘಟನೋತ್ತರ ಅನುಮೋದನೆ ನೀಡಿತು.

೨. ೨೦೧೭-೧೮ನೇ ಸಾಲಿನ ವಿದ್ಯಾರಣ್ಯದ ಅಧ್ಯಯನ ವಿಭಾಗಗಳಿಗೆ ಹಾಗೂ ಮಾನ್ಯತಾ ಕೇಂದ್ರಗಳಿಗೆ ಬಾಹ್ಯ ಮಾರ್ಗದರ್ಶಕರಾಗಲು ಪರಿಗಣಿಸುವಂತೆ ಕೋರಿ ೧೯ ಜನ ಅಧ್ಯಾಪಕರು ಅರ್ಜಿ ಸಲ್ಲಿಸಿದ ಬಾಹ್ಯ ಮಾರ್ಗದರ್ಶಕರ ಆಯ್ಕೆಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು. ಹಾಗೂ ಕನಿಷ್ಟ ೫ ವರ್ಷಗಳ ಸೇವಾನುಭವ ಉಳ್ಳವರನ್ನು ಆಯ್ಕೆ ಮಾಡಲು ಮತ್ತು ನಿವೃತ್ತಿ ಅಂಚಿನಲ್ಲಿರುವ ಅಧ್ಯಾಪಕರ ಹೆಸರುಗಳನ್ನು ಕೈಬಿಡಲು ಸಭೆ ಸೂಚಿಸಿತು.

೩. ೨೦೧೬-೧೭ನೇ ಸಾಲಿನಲ್ಲಿ ಜಾರಿಯಲ್ಲಿರುವ ೧೮೫ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಪಿಎಚ್.ಡಿ. ಅಧ್ಯಯನ ನಿಯಮಾವಳಿಯ ನೂತನ ಆಂಶಿಕ ಪರಿಷ್ಕರಣೆಗೆ ಸಭೆ ತಾತ್ವಿಕ ಅನುಮೋದನೆ ನೀಡಿತು, ಜಾರಿಗೊಳಿಸಲು ಹಾಗೂ ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮರುಮಂಡಿಸಲು ಸೂಚಿಸಿತು.

೪. ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರಗಳ ಕನ್ನಡ (ವಿಷಯ) ಪಿಎಚ್.ಡಿ. ಮಹಾಪ್ರಬಂಧಗಳ ಮೌಲ್ಯಮಾಪಕರ ಪರಿಷ್ಕೃತ ಪಟ್ಟಿಗೆ ಸಭೆ ಘಟನೋತ್ತರ ಅನುಮೋದನೆ ನೀಡಿತು.

೧೯೦.೧೨. ದೂರಶಿಕ್ಷಣ ನಿರ್ದೇಶನಾಲಯ ಪ್ರಸ್ತಾವನೆಗಳು

೧. ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಸರಕಾರದ ಆದೇಶದಂತೆ ಸಂಭಾವನೆ ನಿಲ್ಲಿಸಲು ಸಭೆ ಸೂಚಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಸರ್ಕಾರದ ಆದೇಶಕ್ಕನುಗುಣವಾಗಿ ಸಮಿತಿ ರಚಿಸಿ. ಪರೀಕ್ಷಾ ಮತ್ತು ಇತರೆ ಶೈಕ್ಷಣಿಕ ಕಾರ್ಯಗಳಿಗೆ ಸಂಭಾವನೆ ನಿಗದಿ ಪಡಿಸಿ ಕಾರ್ಯಕಾರಿ ಸಮಿತಿಯಲ್ಲಿ ಒಪ್ಪಿಗೆ ಪಡೆದುಕೊಂಡಿವೆ. ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗ, ದೂರಶಿಕ್ಷಣ ಮತ್ತು ಚಿತ್ರಕಲೆಗಳಲ್ಲಿ ನಡೆಯುತ್ತಿರುವ ಶೈಕ್ಷಣಿಕ ಕಾರ್ಯಗಳಿಗೆ ಏಕರೂಪ ಸಂಭಾವನೆ ನಿಗದಿಪಡಿಸಲು ಸಮಿತಿ ರಚನೆಗೆ ಮತ್ತೊಮ್ಮೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪರಿಶೀಲಿಸಲು ಕೋರುತ್ತೇನೆ. (ಕುವೆಂಪು ವಿಶ್ವವಿದ್ಯಾಲಯದ ನಿರ್ಣಯ ಪ್ರತಿ ಲಗತ್ತಿಸಿದೆ)

೨. ೨೦೧೭ರ ಯು.ಜಿ.ಸಿ ನಿಯಮಗಳಿಗೆ ಅನುಗುಣವಾಗಿ ದೂರಶಿಕ್ಷಣ ನಿರ್ದೇಶನಾಲಯದ ವೆಬ್‌ಸೈಟ್‌ನ್ನು ಕೆಲವು ಬದಲಾವಣೆಗಳೊಂದಿಗೆ ವೃದ್ಧಿಪಡಿಸಬೇಕಾಗಿದೆ. ಈ ಕುರಿತು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಲು ಕೋರಿದೆ.

೩. ಕಾರ್ಯಕಾರಿ ಸಮಿತಿ ಸಭೆ ಸೂಚನೆಯಂತೆ ೨೦೧೭ನೇ ಸಾಲಿನಿಂದ ೧೨ ಹೊಸ ಕೋರ್ಸ್‌ಗಳ ಅನುಮೋದನೆಗಾಗಿ ಯುಜಿಸಿ ನಿಯಮಗಳ ಪ್ರಕಾರ ವರದಿಯನ್ನು ಸಿದ್ಧಪಡಿಸುವ ಕಾರ್ಯ ನಡೆದಿದೆ. ಮುಂದಿನ ಶೈಕ್ಷಣಿಕ ಸಾಲಿನ ಒಳಗಾಗಿ ಹೊಸ ಕೋರ್ಸ್‌ಗಳ ಪಠ್ಯಕ್ರಮ, ಕಲಿಕಾ ಸಾಮಗ್ರಿ ಮತ್ತು ಶೈಕ್ಷಣಿಕ ರೂಪರೇಷೆಗಳನ್ನು ಸಿದ್ಧಪಡಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಗತ್ಯ ಸಿಬ್ಬಂದಿಯ ನೇಮಕ ಕುರಿತು ಕಾರ್ಯಕಾರಿ ಸಮಿತಿಯ ಅನುಮೋದನೆಗೆ ಸಲ್ಲಿಸಲು ಕೋರಿದೆ.

ನಿರ್ಣಯ: ದೂರಶಿಕ್ಷಣ ನಿರ್ದೇಶನಾಲಯ ಪ್ರಸ್ತಾವನೆಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ತೀರ್ಮಾನಿಸಿತು.

೧. ಆಡಳಿತ ಸಿಬ್ಬಂದಿಗಳಿಗೆ ಪರೀಕ್ಷಾ ಸಂಭಾವನೆಗಳನ್ನು ರಜಾದಿನ ಹಾಗೂ ಹೆಚ್ಚುವರಿ ಸಮಯದಲ್ಲಿ ನಿರ್ವಹಿಸಿದ ಕೆಲಸಗಳಿಗೆ ನಿಯಮಾನುಸಾರ ನೀಡಬಹುದೆಂದು ಸಭೆ ತೀರ್ಮಾನಿಸಿತು.

೨. ೨೦೧೭ರ ಯು.ಜಿ.ಸಿ ನಿಯಮಗಳಿಗೆ ಅನುಗುಣವಾಗಿ ದೂರಶಿಕ್ಷಣ ನಿರ್ದೇಶನಾಲಯದ ವೆಬ್‌ಸೈಟ್‌ನ್ನು ಪರಿಷ್ಕರಿಸಿ ಅಭಿವೃದ್ಧಿಪಡಿಸಲು ಸಭೆ ಅನುಮೋದನೆ ನೀಡಿತು.

೩. ೨೦೧೭ನೇ ಸಾಲಿನಿಂದ ೧೨ ಹೊಸ ಕೋರ್ಸ್‌ಗಳ ಅನುಮೋದನೆಗಾಗಿ ಯುಜಿಸಿ ನಿಯಮಗಳ ಪ್ರಕಾರ ವರದಿಯನ್ನು ಸಿದ್ಧಪಡಿಸುವ ಕಾರ್ಯಕ್ಕೆ, ಮುಂದಿನ ಶೈಕ್ಷಣಿಕ ಸಾಲಿನ ಒಳಗಾಗಿ ಹೊಸ ಕೋರ್ಸ್‌ಗಳ ಪಠ್ಯಕ್ರಮ, ಕಲಿಕಾ ಸಾಮಗ್ರಿ ಮತ್ತು ಶೈಕ್ಷಣಿಕ ರೂಪರೇಷೆಗಳನ್ನು ಸಿದ್ಧಪಡಿಸಲು ಹಾಗೂ ಸಿಬ್ಬಂದಿ ನೇಮಕಾತಿಗೆ ಕ್ರಮಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

**೧೯೦.೧೩. ಡಾ. ಡಿ.ಎನ್. ಶಂಕರಭಟ್ ಇವರ ಕನ್ನಡ ಭಾಷೆಯ ಕಲ್ಪಿತ ಚರಿತ್ರೆ (ಕಪ್ಪುಹಲಗೆ ಯೋಜನೆಯಡಿ ಪ್ರಕಟಗೊಂಡ) ಕೃತಿಯ ಕುರಿತು.**

ನಿರ್ಣಯ: ಡಾ. ಡಿ.ಎನ್. ಶಂಕರಭಟ್ ಅವರ ಕನ್ನಡ ಭಾಷೆಯ ಕಲ್ಪಿತ ಚರಿತ್ರೆ ಕುರಿತು ಇದು ವಿಶೇಷ ಸಂದರ್ಭ ಎಂದು ಪರಿಗಣಿಸಿ ಪುಸ್ತಕದ ಹಕ್ಕು ಅವರಿಗೆ ನೀಡಿ, ಈ ಹಿಂದಿನ ಪ್ರಕ್ರಿಯೆಗೆ ಗೌರವ ಸಂಭಾವನೆ ರೂ. ೩೦,೦೦೦/-ಗಳನ್ನು ಪಾವತಿಸಲು ಹಾಗೂ ಮರುಮುದ್ರಣಕ್ಕೆ ಒಪ್ಪಿಗೆ ನೀಡಿದಲ್ಲಿ ನಿಯಮಾಸಾರ ಸಂಭಾವನೆ ಪಾವತಿಗೆ ಕ್ರಮಕೈಗೊಳ್ಳಲು ಸಭೆ ಸೂಚಿಸಿತು.

**೧೯೦.೧೪. ಶ್ರೀ ಪಿ.ಎಸ್. ಕರುಣಾಕರ ಇವರು ಶಿಕ್ಷೆ ರದ್ದತಿ ಕೋರಿದ ದಿನಾಂಕ ೧೬.೧೦.೨೦೧೭ರ ಮನವಿ ಕುರಿತು.**

ನಿರ್ಣಯ: ದಿನಾಂಕ ೧೬.೧೦.೨೦೧೭ರಂದು ಶ್ರೀ ಪಿ.ಎಸ್. ಕರುಣಾಕರ ಇವರು ಶಿಕ್ಷೆ ರದ್ದತಿ ಕೋರಿದ ಮನವಿಯನ್ನು ಪರಿಶೀಲಿಸಿದ ಸಭೆಯು ಅವರ ಪತ್ನಿ ಮತ್ತು ಸದರಿ ಸಿಬ್ಬಂದಿಯಿಂದ ಇನ್ನುಮುಂದೆ ಈರೀತಿ ನಡೆದುಕೊಳ್ಳುವುದಿಲ್ಲ ಈರೀತಿ ನಡೆದುಕೊಂಡಲ್ಲಿ ನನ್ನಮೇಲೆ ಶಿಸ್ತುಕ್ರಮಕೈಗೊಳ್ಳಬಹುದು ಎನ್ನುವ ಬಗ್ಗೆ ಮುಚ್ಚಳಿಕೆಯನ್ನು ಇಬ್ಬರಿಂದಲೂ ಪಡೆದು, ಮಾನವೀಯತೆ ದೃಷ್ಟಿಯಿಂದ ಈ ಹಿಂದೆ ನಿರ್ವಹಿಸುತ್ತಿದ್ದ ಪ್ರಥಮದರ್ಜೆ ಸಹಾಯಕ (ದೂ.ಶಿ) ಹುದ್ದೆಯಲ್ಲಿ ಮುಂದುವರೆಸಲು ಅನುಮತಿ ನೀಡಿತು.

ಸದರಿಯವರು ಪದಾವನತಿ ಹೊಂದಿ 'ಡಿ' ದರ್ಜೆ ನೌಕರರಾಗಿ ಕಾರ್ಯನಿರ್ವಹಿಸಿದ ಅವಧಿಯನ್ನು ಶಿಕ್ಷೆ ಎಂದು ಪರಿಗಣಿಸಿ ಈ ಅವಧಿಗೆ ಸಂಬಂಧಿಸಿ ಯಾವುದೇ ಆರ್ಥಿಕ ಸೌಲಭ್ಯಗಳನ್ನು ಪಾವತಿಸದಿರಲು ಸಭೆ ನಿರ್ಣಯಿಸಿತು.

**೧೯೦.೧೫. ಶ್ರೀ ಎಂ.ಸಿ. ಗುಡಿಮನಿ ಇವರು ಸಹಾಯಕ ಗ್ರಂಥಪಾಲಕರ ನೇಮಕಾತಿ ಸಿಂಧುಗೊಳಿಸಲು ಕೋರಿದ ದಿನಾಂಕ ೨೫.೦೪.೨೦೧೭ರ ಮನವಿ ಕುರಿತು.**

ನಿರ್ಣಯ: ಶ್ರೀ ಎಂ.ಸಿ. ಗುಡಿಮನಿ ಇವರು ಸಹಾಯಕ ಗ್ರಂಥಪಾಲಕರ ನೇಮಕಾತಿ ಸಿಂಧುಗೊಳಿಸಲು ಕೋರಿದ ದಿನಾಂಕ ೨೫.೦೪.೨೦೧೭ರ ಮನವಿ ಕುರಿತಂತೆ ಕಾನೂನು ಸಲಹೆಗಾರ ಸಲಹೆಯನ್ನು ಪಡೆಯಲು ಸಭೆ ತೀರ್ಮಾನಿಸಿತು.

**೧೯೦.೧೬. ಹಸ್ತಪ್ರತಿ ವಿಭಾಗದ ಪಿಎಚ್.ಡಿ. ವಿದ್ಯಾರ್ಥಿಯಾದ ಶ್ರೀ ಸಂತೋಷ್ ಇವರ ಅನಾರೋಗ್ಯ ಸಂಬಂಧಿಸಿ ಟಿಎಸ್‌ಪಿ ಸಹಾಯಧನ ಮನವಿ ಕುರಿತು.**

ನಿರ್ಣಯ: ಹಸ್ತಪ್ರತಿ ವಿಭಾಗದ ಪಿಎಚ್.ಡಿ. ವಿದ್ಯಾರ್ಥಿಯಾದ ಶ್ರೀ ಸಂತೋಷ್ ಇವರ ಅನಾರೋಗ್ಯ ಸಂಬಂಧಿಸಿದಂತೆ ಸಭೆಯು ಪರಿಶೀಲಿಸಿ ಇದೊಂದು ವಿಶೇಷ ಸಂದರ್ಭ ಎಂದು ಪರಿಗಣಿಸಿ ಟಿಎಸ್‌ಪಿ ಅನುದಾನದಿಂದ ಸಹಾಯಧನ ನೀಡಲು ಅನುಮೋದನೆ ನೀಡಿತು ಹಾಗೂ ಈ ಕುರಿತು ಸರ್ಕಾರಕ್ಕೆ ಪತ್ರ ಬರೆದು ಮಾಹಿತಿ ನೀಡಲು ಸಭೆ ಸೂಚಿಸಿತು.

೧೯೦.೧೭. ಅಭಿವೃದ್ಧಿ ಅಧ್ಯಯನ ವಿಭಾಗದ ಪಿಎಚ್.ಡಿ. ವಿದ್ಯಾರ್ಥಿಯಾದ ಶ್ರೀ ವೆಂಕಟರಮಣ ಇವರ ಅನಾರೋಗ್ಯ ಸಂಬಂಧಿಸಿ ಎಸ್‌ಸಿಪಿ ಸಹಾಯಧನ ಮನವಿ ಕುರಿತು.

ನಿರ್ಣಯ: ಅಭಿವೃದ್ಧಿ ಅಧ್ಯಯನ ವಿಭಾಗದ ಪಿಎಚ್.ಡಿ. ವಿದ್ಯಾರ್ಥಿಯಾದ ಶ್ರೀ ವೆಂಕಟರಮಣ ಇವರ ಅನಾರೋಗ್ಯ ಸಂಬಂಧಿಸಿದಂತೆ ಸಭೆಯು ಪರಿಶೀಲಿಸಿ ಇದೊಂದು ವಿಶೇಷ ಸಂದರ್ಭ ಎಂದು ಪರಿಗಣಿಸಿ ಟಿಎಸ್‌ಪಿ ಅನುದಾನದಿಂದ ಸಹಾಯಧನ ನೀಡಲು ಅನುಮೋದನೆ ನೀಡಿತು ಹಾಗೂ ಈ ಕುರಿತು ಸರ್ಕಾರಕ್ಕೆ ಪತ್ರ ಬರೆದು ಮಾಹಿತಿ ನೀಡುವುದು ಹಾಗೂ ಅನಾರೋಗ್ಯ ಸಂಬಂಧ ರಜೆ ಅವಧಿಯ ಸದರಿ ವಿದ್ಯಾರ್ಥಿಯ ಶಿಷ್ಯವೇತನವನ್ನು ಬಿಡುಗಡೆಗೊಳಿಸಲು ಸಭೆ ಸೂಚಿಸಿತು.

೧೯೦.೧೮. ಸಮಿತಿಗಳ ರಚನೆ ಕುರಿತು.

ನಿರ್ಣಯ: ಕನ್ನಡ ವಿಶ್ವವಿದ್ಯಾಲಯದ ವಿವಿಧ ಉಪಸಮಿತಿಗಳಿಗೆ ಈ ಕೆಳಗಿನಂತೆ ಸದಸ್ಯರನ್ನು ನಿಯೋಜಿಸಲು ಸಭೆ ಅನುಮೋದನೆ ನೀಡಿತು.

| | |
|---|---|
| ೧. ಹಣಕಾಸು ಸಮಿತಿ | ಡಾ. ಜಿ. ಸಿದ್ಧಲಿಂಗಯ್ಯ |
| ೨. ಕಾಮಗಾರಿ ಸಲಹಾ ಸಮಿತಿ | ಶ್ರೀ ಅಲ್ಲಮಪ್ರಭು ಬೆಟ್ಟದೂರು |
| ೩. ದೂರಶಿಕ್ಷಣ ನಿರ್ದೇಶನಾಲಯ ಸಲಹಾ ಸಮಿತಿ | ಡಾ. ಓ. ಓಬಯ್ಯ |
| ೪. ಗ್ರಂಥಾಲಯ ಸಲಹಾ ಸಮಿತಿ | ಡಾ. ಎ.ವಿ. ನಾವಡ |
| ೫. ಪ್ರಸಾರಾಂಗ ಸಲಹಾ ಸಮಿತಿ | ಡಾ. ವೀರಣ್ಣ ರಾಜೂರ |
| ೬. ಖರೀದಿ ಸಲಹಾ ಸಮಿತಿ | ಶ್ರೀಮತಿ ಮಹಾದೇವಿ ಗೋಕಾಕ್ |
| ೭. ಚಿತ್ರಕಲಾ ವಿದ್ಯಾಲಯಗಳ ಸಲಹಾ ಸಮಿತಿ | ಶ್ರೀ ಸರಜೂ ಕಾಟ್ಕರ್ |
| ೮. ಮಹಿಳಾ ದೌರ್ಜನ್ಯ ಸಮಿತಿ | ಶ್ರೀಮತಿ ಮಹಾದೇವಿ ಗೋಕಾಕ್ |

೧೯೦.೧೯. ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಇವರ ಸೆಬಾಟಿಕಲ್ ರಜೆ ಕುರಿತು.

ನಿರ್ಣಯ: ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಇವರ ಸೆಬಾಟಿಕಲ್ ರಜೆ ಕೋರಿಕೆಯನ್ನು ಸಭೆಯು ಪರಿಶೀಲಿಸಿ, ನ್ಯಾಕ್ ಸಂಬಂಧಿಸಿದ ವಿಭಾಗದ ದಾಖಲೆಗಳನ್ನು ಐಕ್ಯೂಎಸಿಗೆ ಸಲ್ಲಿಸಿದ ನಂತರ, ಯು.ಜಿ.ಸಿ. ನ್ಯಾಕ್ ಸಮಿತಿಯು ವಿಶ್ವವಿದ್ಯಾಲಯಕ್ಕೆ ಬೇಟಿನೀಡುವ ಸಂದರ್ಭದಲ್ಲಿ ವಿಶ್ವವಿದ್ಯಾಲಯಕ್ಕೆ ಹಾಜರಾಗುವ ಶರತ್ತಿಗೊಳಪಡಿಸಿ ಸೆಬಾಟಿಕಲ್ ರಜೆಗೆ ಅನುಮೋದನೆ ನೀಡಿತು.

೧೯೦.೨೦. ಕಾರ್ಯಕಾರಿ ಮತ್ತು ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೆ ಗುರುತಿನ ಚೀಟಿ ನೀಡುವ ಕೋರಿತು.

ನಿರ್ಣಯ: ಕಾರ್ಯಕಾರಿ ಮತ್ತು ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೆ ಗುರುತಿನ ಚೀಟಿಗಳನ್ನು ಮುದ್ರಿಸಿ ಒದಗಿಸಲು ಸಭೆ ಅನುಮೋದನೆ ನೀಡಿತು.

೧೯೦.೨೧. ಹಣಕಾಸು ಅಧಿಕಾರಿಗಳು ೨೦೧೬-೧೭ನೇ ಸಾಲಿನ ಅನುದಾನ ವಿವರಗಳನ್ನು ಸಭೆಗೆ ಮಂಡಿಸುವ ಕುರಿತು.

ನಿರ್ಣಯ: ಹಣಕಾಸು ಅಧಿಕಾರಿಗಳು ೨೦೧೬-೧೭ನೇ ಸಾಲಿನ ಅನುದಾನ ವಿವರ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸಭೆಗೆ ಮಂಡಿಸಿದರು. ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿಯು ತುಂಬಾ ಗಂಭೀರವಾಗಿರುವುದನ್ನು ಸಭೆ ಗಮನಿಸಿ ಸರ್ಕಾರದೊಂದಿಗೆ ವ್ಯವಹರಿಸಲು ಕಾರ್ಯಕಾರಿ ಸಮಿತಿ ಸದಸ್ಯರನ್ನೊಳಗೊಂಡ ಸಮಿತಿಯು ಮುಖ್ಯ ಮಂತ್ರಿಗಳನ್ನು ಹಾಗೂ ಶಿಕ್ಷಣ ಸಚಿವರನ್ನು ಬೇಟಿಮಾಡಲು ಸಭೆ ತೀಮಾನಿಸಿತು.

೧೯೦.೨೨. ಡಾ. ಕೆ.ಸಿ. ಶಿವಾರೆಡ್ಡಿ, ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ ಇವರು ಕೇಂದ್ರದ ಅಗತ್ಯತೆಗೆ ಬೇಕಾದ ಸೌಲಭ್ಯಗಳ ಬೇಡಿಕೆ ಸಲ್ಲಿಸುವ ಕುರಿತು.

ಡಾ. ಕೆ.ಸಿ. ಶಿವಾರೆಡ್ಡಿ, ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ ಇವರು ಕೇಂದ್ರದ ಅಗತ್ಯತೆಗೆ ಬೇಕಾದ ಸೌಲಭ್ಯಗಳ ಕುರಿತ ಬೇಡಿಕೆಗಳನ್ನು ಈ ಕೆಳಗಿನಂತೆ ಸಭೆಗೆ ಮಂಡಿಸಿದರು.

೧. ವಿದ್ಯಾರ್ಥಿ ವಿದ್ಯಾರ್ಥಿನಿಯರ ಬಳಕೆಗಾಗಿ ವಸತಿ ನಿಲಯವನ್ನು ನಿರ್ಮಿಸುವುದು.

೨. ನೀರಿನ ಸೌಲಭ್ಯವನ್ನು ಒದಗಿಸುವುದು.

೩. ಸಭಾಂಗಣದ ವ್ಯವಸ್ಥೆಯನ್ನು ಕಲ್ಪಿಸುವುದು.

೪. ಶಿಲ್ಪಗಳನ್ನು ರಕ್ಷಿಸಲು ಶಿಲ್ಪವನವನ್ನು ನಿರ್ಮಿಸುವುದು.

೫. ಪಕ್ಷಿಕಾಶಿ ಗ್ಯಾಲರಿಯನ್ನು ನಿರ್ಮಿಸುವುದು.

೬. ಪೂರ್ಣಚಂದ್ರ ತೇಜಸ್ವಿ ಅವರ ಹೆಸರಿನ ಪರಿಸರ ಜೀವವೈವಿಧ್ಯಮಯ ಆಡಿಯೋ ವಿಡಿಯೋ ಮಾಡುವ ಯೋಜನೆಯ ಪ್ರಸ್ತಾವನೆಗೆ ಅನುಮತಿ

೭. ಕೇಂದ್ರದ ಉಪಯೋಗಕ್ಕಾಗಿ ಕೇಂದ್ರ ಪಕ್ಕದಲ್ಲಿರುವ ಭೂಮಿಯನ್ನು ಅರಣ್ಯ ಇಲಾಖೆಯಿಂದ ಕೋರುವುದು.

೮. ಕೇಂದ್ರಕ್ಕೆ ಕಾಂಪೌಂಡ್ ನಿರ್ಮಿಸುವುದು ಮತ್ತು ದ್ವಾರಬಾಗಿಲು ನಿರ್ಮಿಸುವುದು.

೯. ಕೇಂದ್ರದ ಕಚೇರಿಯಲ್ಲಿ ಪ್ರಸಾರಾಂಗದ ಪುಸ್ತಕ ಮಾರಾಟ ಕೇಂದ್ರ ಮತ್ತು ಕಾಫಿಹೌಸ್ ನಿರ್ಮಿಸುವುದು

೧೦. ಕೇಂದ್ರದ ಪಕ್ಕದಲ್ಲಿರುವ ಕಟ್ಟಡವನ್ನು ಸದ್ಯಕ್ಕೆ ವಿದ್ಯಾರ್ಥಿಗಳ ಬಳಕೆಗಾಗಿ ವಸತಿನಿಲಯವನ್ನಾಗಿ ಪರಿವರ್ತಿಸುವುದು.

ನಿರ್ಣಯ: ಮೇಲಿನ ವಿಷಯಗಳನ್ನು ಚರ್ಚಿಸಿದ ಸಮಿತಿಯು ಸಂದರ್ಭಾನುಸಾರ ಮಾನ್ಯ ಕುಲಪತಿಯವರು ಆಡಳಿತಾತ್ಮಕ ಕ್ರಮಕೈಗೊಳ್ಳಲು ನಿರ್ಣಯಿಸಿತು.

**೧೯೦.೨೩. ವಿಶ್ವವಿದ್ಯಾಲಯದ ಆರ್ಥಿಕ ಸದೃಢತೆಗಾಗಿ ಸಂಪನ್ಮೂಲ ಕ್ರೋಢೀರಣಕ್ಕಾಗಿ ಖಾಸಗಿ ಸಹಭಾಗಿತ್ವದೊಂದಿಗೆ ಕೆಳಕಂಡ ಯೋಜನೆಗಳನ್ನು ರೂಪಿಸಿಕೊಳ್ಳುವ ಬಗ್ಗೆ.**

ನಿರ್ಣಯ: ವಿಶ್ವವಿದ್ಯಾಲಯದ ಆಶಯಕ್ಕೆ ದಕ್ಕೆಯಾಗದಂತೆ, ವಿಶ್ವವಿದ್ಯಾಲಯದ ಆರ್ಥಿಕ ಸದೃಢತೆಗಾಗಿ, ಸಂಪನ್ಮೂಲಕ್ಕಾಗಿ ಖಾಸಗಿ ಸಹಬಾಗಿತ್ವದೊಂದಿಗೆ ೧. ಹಸಿರು ಪ್ರವಾಸೋದ್ಯಮ: ಕೃಷಿ, ನೀರು, ಆಹಾರ, ಆರೋಗ್ಯ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ೨. ಸಾಂಪ್ರದಾಯಿಕ ಇಂಧನ : ಸೌರಶಕ್ತಿ (ಸೋಲಾರ್), ಪವನಶಕ್ತಿ ಮತ್ತು ಜೈವಿಕ ಇಂಧನ ಯೋಜನೆಗಳನ್ನು ಅನುಭವಿ ತಜ್ಞರೊಂದಿಗೆ ರೂಪಿಸಿಕೊಳ್ಳುವುದು, ಹಾಗೂ ಖಾಸಗಿಯವರ ಜೊತೆ ಈ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಪತ್ರ ಬರೆದು ಸಂಪುಟ ಸಮಿತಿಯ ಅನುಮತಿ ಪಡೆಯುವುದು ಹಾಗೂ ಈ ಸಂಬಂಧ ಚರ್ಚಿಸಲು ವಿಶೇಷ ಕಾರ್ಯಕಾರಿ ಸಮಿತಿಯನ್ನು ಆಯೋಜಿಸಲು ಸಭೆ ನಿರ್ಣಯಿಸಿತು.

**೧೯೦.೨೪. ಬೆಳ್ಳಿಹಬ್ಬದ ನಿಮಿತ್ತ ನೆನಪಿನ ಕಾಣಿಕೆಗಳನ್ನು ನೀಡುವ ಬಗ್ಗೆ.**

ನಿರ್ಣಯ: ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ನಿಮಿತ್ತ ಎಲ್ಲರಿಗೂ ನೆನಪಿನ ಕಾಣಿಕೆಗಳನ್ನು ನೀಡಲು ಸಭೆ ತೀರ್ಮಾನಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಕುಲಸಚಿವರು | ಕುಲಪತಿಗಳು |
| ಪದನಿಮಿತ್ತ ಕಾರ್ಯದರ್ಶಿ | ಅಧ್ಯಕ್ಷರು |